	ಆ)	1991-92	1992-93	1993-94
			(ಲಕ್ಷ ರೂ.ಗಳಲ್ಲಿ)	
1)	ಬೆಂಗಳೂರು	694.85	780.11	708.54
2)	ಮಂಗಳೂರು			
3)	ಬೆಳಗಾಂ	67.47	33.83	29.32
4)	ಗುಲ್ಬರ್ಗಾ	12.68	17.53	17.36
5)	ಶಿವಮೊಗ್ಗ-ಭದ್ರಾವತಿ	13.15	13.75	11.32
6)	ಹುಬ್ಬಳ್ಳಿ-ಧಾರವಾಡ	58.43	87.54	64.94
7)	ಮೈಸೂರು	58.48	64.00	82.10

ಇ) ಅಂತ. ಪ್ರಕರಣಗಳು ಬಂದಲ್ಲಿ, ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಸಮಾಜ ಕಲ್ಯಾಣ ಇಲಾಖೆಯಲ್ಲಿ ಸಿಬ್ಬಂದಿ ಕೊರತೆ

2083 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕೊರತೆಯಿರುವ ಸಮಾಜ ಕಲ್ಯಾಣ ಇಲಾಖೆಯ ಸಿಬ್ಬಂದಿಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)

ಆ) ಈ ಸಿಬ್ಬಂದಿಗಳ ಕೊರತೆಯಿಂದ ಫಲಾನುಭವಿಗಳ ಸೌಲಭ್ಯವನ್ನು ಸಕಾಲದಲ್ಲಿ ಒದಗಿಸಲು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ರಮೇಶ್ ಸಿ ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ಸಮಾಜ ಕಲ್ಯಾಣ ಇಲಾಖೆಯಲ್ಲಿ ಒಟ್ಟು 806 ಹುದ್ದೆಗಳು ರಾಜ್ಯಾದ್ಯಂತ ಖಾಲಿ ಇವೆ. (ಪಟ್ಟಿ ಲಗತ್ತಿಸಿದೆ).

ಆ) ಫಲಾನುಭವಿಗಳಿಗೆ ಸೌಲಭ್ಯವನ್ನು ಸಕಾಲದಲ್ಲಿ ಒದಗಿಸಲು ಖಾಲಿ ಇರುವ ಹುದ್ದೆಗಳಿಂದ ಆಗುವ ತೊಂದರೆಯನ್ನು ನಿವಾರಿಸುವ ಉದ್ದೇಶದಿಂದ ಇಲಾಖೆ ಸದರಿ ಸ್ಥಳಗಳಿಗೆ ತಾತ್ಕಾಲಿಕವಾಗಿ

ಇಲಾಖೆಯ ಇತರ ಸಿಬ್ಬಂದಿಗಳನ್ನು ಹೆಚ್ಚಿನ ಪ್ರಭಾರದಲ್ಲಿರಿಸಿ ಕಾರ್ಯನಿರ್ವಹಣೆ ಮಾಡಲು ಸೂಚಿಸಿರುವುದರಿಂದ ಫಲಾನುಭವಿಗಳಿಗೆ ಸೌಲಭ್ಯವನ್ನು ಸಕಾಲದಲ್ಲಿ ಒದಗಿಸುವಲ್ಲಿ ತೊಂದರೆಯಾಗಿರುವ ಬಗ್ಗೆ ಸರ್ಕಾರಕ್ಕೆ ಯಾವುದೇ ವರದಿ ಬಂದಿರುವುದಿಲ್ಲ.

ಇ) ಆದರೂ ಖಾಲಿ ಇರುವ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದು.

ಕ್ರಮ ಸಂಖ್ಯೆ	*ಜಿಲ್ಲೆಯ ಹೆಸರು*	*ಖಾಲಿ ಇರುವ ಹುದ್ದೆಗಳ ಸಂಖ್ಯೆ*
1	2	3
1.	ಬೆಂಗಳೂರು (ಗ್ರಾಮಾಂತರ) ಜಿಲ್ಲೆ	16
2.	ಬೆಂಗಳೂರು (ನಗರ) ಜಿಲ್ಲೆ.	8
3.	ಶಿವಮೊಗ್ಗ	18
4.	ಚಿತ್ರದುರ್ಗ	16
5.	ಕೋಲಾರ	84
6.	ತುಮಕೂರು	39
7.	ಮೈಸೂರು	52
8.	ಮಂಡ್ಯ	34
9.	ಮಡಿಕೇರಿ	37
10.	ದಕ್ಷಿಣ ಕನ್ನಡ	55
11.	ಹಾಸನ	11
12.	ಚಿಕ್ಕಮಗಳೂರು	10
13.	ಬೆಳಗಾಂ	39
14.	ಬಿಜಾಪುರ	45
15.	ಧಾರವಾಡ	40
16.	ಕಾರವಾರ	30

1	2	3
17.	ಗುಲ್ಬರ್ಗಾ	56
18.	ಬೀದರ್	21
19.	ರಾಯಚೂರು	47
20.	ಬಳ್ಳಾರಿ	36
21.	ಪಿ.ಸಿ.ಓ. ಮೈಸೂರು	71
22.	ಪಿ.ಸಿ.ಓ.ಪುತ್ತೂರು	13
23.	ಪಿ.ಸಿ.ಓ.ಮಡಿಕೇರಿ	13
24.	ಪಿ.ಸಿ.ಓ. ಉಡುಪಿ	5
25.	ಪಿ.ಸಿ.ಓ., ಚಿಕ್ಕಮಗಳೂರು	2
26.	ಜೇನುಕುರುಬರ ಆಫೀಸರ್, ಹುಣಸೂರು	4
27.	ಪರೀಕ್ಷಾಪೂರ್ವ ತರಬೇತಿ ಕೇಂದ್ರ, ಸಂಪಂಗಿರಾಮನಗರ.	1
28.	ಪರೀಕ್ಷಾಪೂರ್ವ ತರಬೇತಿ ಕೇಂದ್ರ, ಇಂದಿರಾನಗರ	1
29.	ಪರೀಕ್ಷಾಪೂರ್ವ ತರಬೇತಿ ಕೇಂದ್ರ, ಮೈಸೂರು	-
30.	ಪರೀಕ್ಷಾಪೂರ್ವ ತರಬೇತಿ ಕೇಂದ್ರ, ಗುಲ್ಬರ್ಗಾ	2
31.	ಪರೀಕ್ಷಾಪೂರ್ವ ತರಬೇತಿ ಕೇಂದ್ರ, ಧಾರವಾಡ	2
	ಒಟ್ಟು	**806**

ದ.ಕನ್ನಡ ಜಿಲ್ಲೆಯ ಬೃಹತ್ ಕೈಗಾರಿಕೆಗಳ ಕುರಿತು.

2085 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲಯಲ್ಲಿ ಅನುಮತಿ ಪಡೆದ ಬೃಹತ್ ಉದ್ದಿಮೆಗಳಾವುವು?

ಆ) ಈ ಉದ್ದಿಮೆಗಳು ಕೇಳಿರುವ ಭೂಮಿ ಎಷ್ಟು (ಉದ್ದಿಮೆವಾರು ವಿವರ ನೀಡುವುದು)

ಇ) ಯಾವ ಯಾವ ಉದ್ದಿಮೆಗಳು ಎಷ್ಟೆಷ್ಟು ಭೂಮಿಗೆ ಬೇಡಿಕೆ ಸಲ್ಲಿಸಿವೆ.